## 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದಾವಣಗೆರೆ .

**ಎಸ್.ಸಿ. ನಂ.116/2024**

**ದಿನಾಂಕಃ 24 ನೇ ಏಪ್ರಿಲ್ 2025**

**ಫಿರ್ಯಾದುದಾರರು** ಃ ಕೆ.ಟಿ.ಜಿ. ನಗರ ಪೊಲೀಸ್ ಠಾಣೆ.

-/ **ವಿರುದ್ಧ** /-

**ಆರೋಪಿ /ತರು** ಃ ಆನಂದ

**ದೋಷಾರೋಪಣೆ**

ಶ್ರೀಯುತ ಃ **ಎಂ.ಹೆಚ್. ಅಣ್ಣಯ್ಯನವರ** ಬಿಕಾಂ.ಎಲ್.ಎಲ್.ಬಿ. (ವಿಶೇಷ), 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ದಾವಣಗೆರೆ, ಆದ ನಾನು ನಿಮ್ಮನ್ನು ಅಂದರೆ,

ಆನಂದ ಬಿನ್ ಲೇಟ್ ಸತೀಶ್, ವಯಸ್ಸು 30 ವರ್ಷ,
ವ್ಯಾಪಾರ ವೃತ್ತಿ, ವಾಸ ಉಪ್ಪುನೀರು ಬಾವಿ ಹತ್ತಿರ,
ಬುರಜನಹಟ್ಟಿ, ಚಿತ್ರದುರ್ಗ ಟೌನ್, ದಾವಣಗೆರೆ.

ಆರೋಪಿಗಳಾದ ನಿಮ್ಮ ಮೇಲಿನ ದೋಷಾರೋಪಣೆ ಈ ಕೆಳಕಂಡಂತೆ ಇರುತ್ತದೆ.

ದಿಃ 07/01/2023 ರಂದು ರಾತ್ರಿ 9-50 ಗಂಟೆ ಸಮಯದಲ್ಲಿ ಕೆ.ಟಿ.ಜಿ.ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಚಾಸಾ.1 ವಿಕ್ರಮ್ ಮತ್ತು ಚಾಸಾ.4 ಪೂಜಾರವರು ಪ್ರೀತಿಸಿ ಮದುವೆಯಾದ ವಿಚಾರವಾಗಿ ಕೋಪಗೊಂಡು ಆರೋಪಿಯಾದ ನೀನು ಚಾಸಾ.4 ಪೂಜಾರವರಿಗೆ ಸೂಳೆಮುಂಡೆ ನನ್ನನ್ನು ಬಿಟ್ಟು ಬೇರೆಯವರನ್ನು ಮದುವೆ ಮಾಡಿಕೊಂಡಿರುವೆಯಾ ಎಂದು ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಮಾಡಿದ್ದು,

ಹಾಗಾಗಿ ಆರೋಪಿಯಾದ ನೀನು ಭಾ.ದಂ.ಸಂ. ಕಲಂ.504ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀನು ತನ್ನ ಜೇಬಿನಲ್ಲಿದ್ದ ಚಾಕುವಿನಿಂದ ಕೊಲೆ ಮಾಡಬೇಕೆಂಬ ಉದ್ದೇಶದಿಂದ ಚಾಸಾ.4 ಪೂಜಾರವರ ಕುತ್ತಿಗೆಯ ಬಲಭಾಗಕ್ಕೆ ಕೊಯ್ದು ರಕ್ತಗಾಯಪಡಿಸಿ ಕೊಲೆ ಮಾಡಲು ಪ್ರಯತ್ನಿಸಿದ್ದು, ಹಾಗಾಗಿ ಆರೋಪಿಯಾದ ನೀನು ಭಾ.ದಂ.ಸಂ. ಕಲಂ.307ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀನು ಚಾಸಾ.4 ಪೂಜಾರವರಿಗೆ ನಿನ್ನನ್ನು ಕೊಲೆ ಮಾಡುತ್ತೇನೆಂದು ಪ್ರಾಣ ಬೆದರಿಕೆ ಹಾಕಿದ್ದು, ಹಾಗಾಗಿ ಆರೋಪಿಯಾದ ನೀನು ಭಾ.ದಂ.ಸಂ. ಕಲಂ.506ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮೇಲಿನ ಆರೋಪಕ್ಕೆ ನಿಮ್ಮನ್ನು ಗುರಿಪಡಿಸಿ ಈ ನ್ಯಾಯಾಲಯದಲ್ಲಿ ವಿಚಾರಣೆ ನಡೆಯಬೇಕೆಂದು ನಿರ್ದೇಶಿಸಲಾಗಿದೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದಾವಣಗೆರೆ**

**ಎಸ್.ಸಿ. ನಂ.116/2024**

ಆನಂದ ಬಿನ್ ಲೇಟ್ ಸತೀಶ್, ವಯಸ್ಸು 30 ವರ್ಷ, ವ್ಯಾಪಾರ ವೃತ್ತಿ, ವಾಸ ಉಪ್ಪುನೀರು ಬಾವಿ ಹತ್ತಿರ, ಬುರಜನಹಟ್ಟಿ ಚಿತ್ರದುರ್ಗ ಟೌನ್, ದಾವಣಗೆರೆ.

**ಆರೋಪಣೆ**

ಪ್ರಶ್ನೆ 1 ಈಗ ಓದಿ ಹೇಳಿದ ಆಪಾದನೆ ನಿನಗೆ ತಿಳಿಯಿತೆ?
ಉತ್ತರ ಃ

ಪ್ರಶ್ನೆ 2 ನೀನು ತಪ್ಪನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆಯಾಗಬೇಕೇ?
ಉತ್ತರ ಃ

(ಮೇಲೆ ನಮೂದು ಮಾಡಿದ ಆರೋಪಿಯ ಹೇಳಿಕೆಯನ್ನು ತನ್ನ ಸಮಕ್ಷಮದಲ್ಲಿ ತೆಗೆದುಕೊಂಡಿದ್ದು ಸದರಿ ಹೇಳಿಕೆಯು ಆರೋಪಿ ನೀಡಿದ ನಿಜವಾದ ಹೇಳಿಕೆ ಇರುತ್ತದೆ.)

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.